ಕಟ್ಟಡ ಏಳುತ್ತಿತ್ತು. ಇವನು ಸುಲಭಕ್ಕೆ ಮಣಿಯುವ ಮಾಣಿಯಲ್ಲ ಎಂಬುದು ಸಾಬೀತಾಗಿತ್ತು. ಪ್ರತಿದಿನವೂ ಆಟವಾಡಿಸಿ ಇವರನ್ನು ಗೋಳು ಹುಯ್ಯಿಕೊಂಡು ಅವನು ಮಜಾ ತೆಗೆದುಕೊಳ್ಳುತ್ತಿದ್ದ. ಅವರ ಮುಂದಿನ ಉದ್ದೇಶ ಏನಿತ್ತೋ?

ಈ ಬಗ್ಗೆ ಮಾತಾಡಲು ಅವತ್ತು ಅಪ್ಪ-ಮಗ ಇಬ್ಬರೂ ಇರಲಿಲ್ಲ. ಫೋನು ಮಾಡಿದಾಗ ಅಪ್ಪ-ಮಗ ಯಾರೊಬ್ಬರೂ ಉತ್ತರಿಸಲಿಲ್ಲ. ವಿಧಿಯಿಲ್ಲದೆ ಅವತ್ತೂ ಗೀತಾ ಮತ್ತು ಮೂರ್ತಿ ಕೆಲಸಗಾರರನ್ನು ಹಿಂದಕ್ಕೆ ಕಳಿಸಿದರು. ಸುಮ್ಮನೆ ಧ್ವಂಸಕ್ಕಿಳಿದರೆ, ಅದು ಜಿದ್ದಾಗಿ ಪರಿಣಮಿಸಿ ಇನ್ನೂ ಹಲವು ತೊಂದರೆಗಳಿಗೆ ನಾಂದಿ ಹಾಡಿದಂತಾಗುತ್ತಿತ್ತು. ಆದಷ್ಟು ನಯವಾಗಿಯೇ ಅವರು ಸಮಸ್ಯೆಯನ್ನು ಬಗೆ ಹರಿಸಿಕೊಳ್ಳಬೇಕಿತ್ತು.

ಇದು ತನ್ನದೇ ಸೈಟು ಅಂತ ಸರ್ಕಾರ್ ಅಂದುಕೊಂಡಿದ್ದಾನೆಯೇ? ಈಗ ಬಿಟ್ಟರೆ ಇನ್ನ್ಯಾವತ್ತೂ ಅವರು ತೆರವು ಮಾಡದೇ ಹೋದರೆ? ದಿನೇ ದಿನೇ ಉಲ್ಬಣವಾಗುತ್ತಿದ್ದ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಲಾಯರನ್ನು ಹಿಡಿಯಲೇ? ಪೊಲೀಸರಿಗೆ ದೂರು ಕೊಡಬೇಕೇ? ಆದದ್ದಾಗಲಿ ಅಂತ ಸುಮ್ಮನೆ ವಾಪಸ್ಸು ಹೋಗಿಬಿಡಲೇ? ಎನ್ನುವ ಯೋಚನೆಗಳಲ್ಲಿ ಮೂರ್ತಿಗೆ ಆ ರಾತ್ರಿ ನಿದ್ದೆ ಬರಲಿಲ್ಲ.

ಗೀತಾ ಮಾತ್ರ ಮೊದಲೇ ಬರೆದಿಟ್ಟುಕೊಂಡ ಹಲವು ನಂಬರುಗಳಿಗೆ ಫೋನಾಯಿಸತೊಡಗಿದಳು. ಮರುದಿನ ಏನು ಮಾಡಬೇಕೆಂದು ಮೂರ್ತಿಗೆ ಹೇಳಿದಳು.ರಾತ್ರಿಯೆಲ್ಲ ಎದ್ದಿದ್ದುಕೊಂಡು ಫೋನಿನಲ್ಲಿ ಕೈಯಾಡಿಸಿಕೊಂಡು ಕೂತಿದ್ದಳು.

## 7

ಬೆಳಿಗ್ಗೆ ಎದ್ದ ಸರ್ಕಾರ್ ಮತ್ತು ಜೂ.ಸರ್ಕಾರ್ ಫೋನಿಗೆ ಗೀತಾಳಿಂದ ಹಲವು ವಿಡಿಯೋಗಳು ಹೋಗಿದ್ದವು.

'ಕಟ್ಟಡ ನಿಯಮಗಳನ್ನು ಪಾಲಿಸದ ಸ್ಮಾರ್ಟ್ ಸಿಟಿ ಎಂಜಿನಿಯರ್ ಸರ್ಕಾರ್', 'ಅಕ್ರಮವಾಗಿ ಅಕ್ಕ ಪಕ್ಕದವರ ನಿವೇಶನಗಳಿಗೆ ಒತ್ತುವರಿ ಮಾಡಿರುವ ಸ್ಮಾರ್ಟ್ ಲಫಂಗ ಸರ್ಕಾರ್', 'ಅಕ್ರಮ ಕಟ್ಟಡ ನಿರ್ಮಾಣ, ಪೊಲೀಸರನ್ನು ಕಳಿಸಿ ಬೆದರಿಸಿದ ಸರ್ಕಾರ್' 'ನಗರದ ಎಲ್ಲೆಲ್ಲಿ ಸರ್ಕಾರ್‌ನ ಆಸ್ತಿ?' 'ಪಕ್ಕದವರ ಸೈಟಿನಲ್ಲಿ ಸರ್ಕಾರೀ ಕಲ್ಲುಗಳ ಅಕ್ರಮ ದಾಸ್ತಾನು' ಎನ್ನುವ ಶೀರ್ಷಿಕೆಗಳ ಅಡಿ ಸರ್ಕಾರ್‌ನ ಕಟ್ಟಡದ ಚಿತ್ರಗಳು, ಒತ್ತುವರಿ ಜಾಗಗಳು ಎಲ್ಲವೂ ದಾಖಲಾಗಿದ್ದವು. ಅವರ ಮತ್ತು ಮಗನ ಫೋಟೊಗಳು ರಾರಾಜಿಸುತ್ತಿದ್ದವು.

ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳ ಸಣ್ಣ ವಿಡಿಯೊ ತುಣುಕುಗಳವು. ಸೀನಿಯರ್ ಮತ್ತು ಜೂನಿಯರ್ ಸರ್ಕಾರ್‌ಗಳು ಈಗ ಉಗುಳು ನುಂಗಿಕೊಂಡರು. ಅವು ಎಲ್ಲಾದರೂ ಪ್ರಸಾರವಾಗುತ್ತಿವೆಯೇ? ಎಂದು ಹುಡುಕಿದರು.

ಅವನ್ನು ಯಾವ ಪತ್ರಿಕೆ ಅಥವಾ ಟೀವಿಯವರೂ ಹಾಕಿರಲಿಲ್ಲ. ಬದಲು ಗೀತಾಳ ನಂಬರಿನಿಂದ 'ಖಾಲಿಮಾಡು ಇಲ್ಲವೇ ಕಳಿಸುವೆ' ಎಂಬ ಸಂದೇಶದ ಜೊತೆಗೆ ಬಂದಿದ್ದವು. ಸರ್ಕಾರ್ ಹೌಹಾರಿದರು.

ಅವರಾಗಲೇ ಬೆಂಗಳೂರಿಗೆ ವರ್ಗಾವಣೆ ಕೋರಿ ಮಂತ್ರಿಗಳಿಗೆ ಲಂಚ ತಿನ್ನಿಸಿದ್ದರು. ಇತ್ತಕಡೆ ನಗರದ ರಸ್ತೆ ಕೆಲಸಗಳು ಭೇಷ್ ಎಂಬಂತೆ ಮುಗಿದಿವೆ' ಎಂದು ವರದಿ ಸಲ್ಲಿಸಿದ್ದರು. ಫುಟ್‌ಪಾತ್‌ಗಳ ಕಲ್ಲುಗಳ ಮರು ಮಾರಾಟದ ಲೆಕ್ಕ ಕೊಟ್ಟಿದ್ದರು. ಯಾರೋ ಕರೆದು ಸನ್ಮಾನಿಸಿದ್ದರು. ಅವರೇ ನಿಯಮ ಮೀರಿ ಅಕ್ರಮ ವ್ಯವಹಾರದಲ್ಲಿ ತೊಡಗಿದ್ದಾರೆ ಎಂದು ಮಾಧ್ಯಮಗಳಲ್ಲಿ ಬಿಂಬಿತವಾದರೆ ಯಾವ ಮಂತ್ರಿಯೂ ಅವರಿಗೆ ಬೆಂಬಲ ನೀಡುತ್ತಿರಲಿಲ್ಲ. ಅವರಷ್ಟೇ ಲಂಚ ಕೊಡುವ ಹಗರಣಗಳಿಲ್ಲದ ಬೇರೆ ಎಂಜಿನಿಯರುಗಳು ಇರುವಾಗ ಅವರ‍್ಯಾಕೆ ತಲೆ ಕೆಡಿಸಿಕೊಂಡಾರು? ಹಾಗೂ ಮಾಡಬೇಕೆಂದಿದ್ದರೆ ದುಪ್ಪಟ್ಟು ಲಂಚ ಕೇಳಲು ಇಷ್ಟು ಹಗರಣವನ್ನೇ ಬಳಸಿಕೊಳ್ಳಬಹುದಿತ್ತು. ಮಂತ್ರಿಗಳಿಗೆ ತಿನ್ನಿಸೀ, ತಿನ್ನಿಸೀ ಅವರಿಗೂ ಸಾಕಾಗಿತ್ತು.

ಅಷ್ಟರಲ್ಲೇ ಮೇಸ್ತ್ರಿಯಿಂದ ಫೋನ್ ಬಂತು.

'ಸರ್, ಆಯಮ್ಮ ಮತ್ತವಳ ಗಂಡ ಜೆಸಿಬಿ ತಂದು ಸಮಾ ಮಾಡ್ತಾ ಅವ್ರೆ ಬೇಗ ಬರ್ರಿ ಸರ್' ಅಂದ ಅವನ ಧ್ವನಿಯಲ್ಲಿ ಗಾಬರಿಯಿತ್ತು.

ಮಂಚದಿಂದ ಜಿಗಿದೆದ್ದ ಸರ್ಕಾರ್ ಗೀತಾಳ ನಂಬರಿಗೆ ಫೋನಾಯಿಸಿದರು. ಸ್ವಿಚ್ ಆನ್ ಮಾಡಿದಾಗ ಕೇಳಿಸಿದ್ದು ಬರೀ ಜೆಸಿಬಿಯ ಸಪ್ಪಳ. ಮರು ಕ್ಷಣ ಫೋನ್ ಸ್ವಿಚ್ ಆಫ್ ಆಯಿತು.

ಸರ್ಕಾರ್ ಲಗುಬಗೆಯಿಂದ 'ಬರುತ್ತಿದ್ದೇನೆ' ಎನ್ನುವ ಸಂದೇಶ ಕಳಿಸಿದರು.